ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಸಚಿವೆಯರು.)

ಅ) ಹೌದು

ಆ) ಕರ್ನಾಟಕ ಲೋಕ ಸೇವಾ ಆಯೋಗ ಖಾಲಿ ಇರುವ ೩೫೬ + ೧೭೩ ಸಹಾಯಕ ಶಸ್ತ್ರ ಚಿಕಿತ್ಸಕರ ಹುದ್ದೆಗಳಿಗೆ ಸೂಕ್ತ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಈಗಾಗಲೇ ಕ್ರಮ ತೆಗೆದುಕೊಂಡಿದೆ. ಸೂಕ್ತ ಅಭ್ಯರ್ಥಿಗಳ ಆಯ್ಕೆಯಾದ ಕೂಡಲೇ ಆದ್ಯತೆಯ ಮೇರೆಗೆ ಈ ಖಾಲಿ ಸ್ಥಾನಗಳನ್ನು ಭರ್ತಿ ಮಾಡಲಾಗುವುದು.

ಇ) ಹೌದು

ಶ್ರೀ ಜಿ.ಎಸ್. ಆಚಾರ್.—ಸನ್ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದ ನಾಲ್ಕು ಆಸ್ಪತ್ರೆಗಳಲ್ಲಿ ವೈದ್ಯರುಗಳು ಇಲ್ಲ.

ಅಧ್ಯಕ್ಷರು.—ನಿಮ್ಮ ಕ್ಷೇತ್ರದಲ್ಲಿ ಒಟ್ಟು ಎಷ್ಟು ಆಸ್ಪತ್ರೆಗಳಿವೆ?

ಶ್ರೀ ಜಿ.ಎಸ್. ಆಚಾರ್.—ನಾಲ್ಕು ಆಸ್ಪತ್ರೆಗಳಲ್ಲಿ ವೈದ್ಯರಿಲ್ಲ. ಕಳೆದ ಐದು ವರ್ಷಗಳಿಂದ ನಾನು ಈ ಪ್ರಶ್ನೆಯನ್ನು ಕೇಳುತ್ತಲೇ ಇದ್ದೇನೆ. ಸರ್ಕಾರದ ಮೇಲೆ ಸರ್ಕಾರ ಬರುತ್ತದೆ. ಮಂತ್ರಿಗಳ ಮೇಲೆ ಮಂತ್ರಿಗಳು ಬಂದಿದ್ದಾರೆ. ಆಶ್ವಾಸನೆಗಳ ಮೇಲೆ ಆಶ್ವಾಸನೆಗಳು ಬಂದಿವೆ. ಏನೆಂದರೆ ಸೂಕ್ತ ಅಭ್ಯರ್ಥಿಗಳನ್ನು ಸರಿಯಾದ ಸಮಯದಲ್ಲಿ ನೇಮಕ ಮಾಡಲಾಗುವುದು. ಭರ್ತಿ ಮಾಡಲಾಗುವುದು. ಎಂದು, ನನ್ನ ಕ್ಷೇತ್ರದ ನಾಲ್ಕು ಆಸ್ಪತ್ರೆಗಳೂ ಹಾಗೆಯೇ ಇವೆ. ಈ ಬಾರಿಯಾದರೂ ಆದೀತೆ? ಇದು ಒಂದು. ಎರಡನೇಯದಾಗಿ, ಕೆಲವು ಆಸ್ಪತ್ರೆಗಳಲ್ಲಿ ಅವರು ಸುದ್ದಿವಿಗಳು, ಇಬ್ಬಿಬ್ಬರು ವೈದ್ಯರಿದ್ದಾರೆ. ಚಿಕ್ಕ ಆಸ್ಪತ್ರೆಗಳಲ್ಲಿ ಇಬ್ಬರು ವೈದ್ಯರು ಇರುವುದನ್ನು ತೆಗೆದು ಒಬ್ಬರು ವೈದ್ಯರೂ ಇಲ್ಲದಿರುವ ಆಸ್ಪತ್ರೆಗಳಿಗೆ ಹಾಕಿಸಿಕೊಡಿ ಎಂದು ಹೇಳಿದ್ದೇನೆ. ಅದನ್ನಾದರೂ ಈಗ ಮಾಡಲಾದೀತೆ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಪ್ರಾಥಮಿಕ ಆರೋಗ್ಯ ಕೇಂದ್ರ, ಹಳ್ಳಿಹೊಳೆ, ಪ್ರಾಥಮಿಕ ಆರೋಗ್ಯ ಕೇಂದ್ರ, ಹಳ್ಳೂರು ಇಲ್ಲಿ ತಲಾ ಒಂದೊಂದು ವೈದ್ಯರ ಹುದ್ದೆ ಖಾಲಿ ಇದೆ. ಪ್ರಾಥಮಿಕ ಆರೋಗ್ಯ ಘಟಕ ಹಾಲಾಡಿಯಲ್ಲಿ, ಶ್ರೀ ಮಾರಪ್ಪಯ್ಯರವರನ್ನು ನೇಮಿಸಿದ್ದು ೧೫-೬-೧೯೯೦ ರಿಂದ ಅವರು ಹಾಜರಿದ್ದಾರೆ. ಪ್ರಾಥಮಿಕ ಆರೋಗ್ಯ ಕೇಂದ್ರ, ಬೈಂದೂರಿನಲ್ಲಿ ಒಂದು ಮಹಿಳಾ ವೈದ್ಯ ಹುದ್ದೆ ಖಾಲಿ ಇದೆ. ಈಗ ಶ್ರೀ ಆಚಾರ್ ಅವರು ಒಬ್ಬೊಬ್ಬ ವೈದ್ಯರನ್ನಾದರೂ ಹಾಕಿಕೊಡಿ ಎಂದು ಹೇಳುತ್ತಿದ್ದಾರೆ. ಅಲ್ಲಿ ಹಾಕುವುದಕ್ಕೆ ಸಾಧ್ಯವಾದರೆ ಹಾಕಿಕೊಡಲಾಗುತ್ತದೆ.

ಶ್ರೀ ಜಿ.ಎಸ್. ಆಚಾರ್.—ಉತ್ತರ ಬರುವಾಗ ಏನಾಯಿತೋ ಗೊತ್ತಿಲ್ಲಿಲ್ಲ. 'ಹಾಲಾಡಿ' ನಾನು ಕೇಳಿಲ್ಲ, ಅದು ಹಕ್ಕಲಾಡಿ. ಹಾಲಾಡಿ ಎನ್ನುವುದು ಶ್ರೀ ಪ್ರತಾಪಚಂದ್ರಶೆಟ್ಟಿ ಅವರ ಕ್ಷೇತ್ರ. ಆದ್ದರಿಂದ ಡಾಕ್ಟರನ್ನು ಹಾಕಿಕೊಡುವಾಗ ಹಕ್ಕಲಾಡಿ ಎಂದು ನೆನಪಿಟ್ಟುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಆಗಬಹುದು.

ಖಾಸಗಿ ವೈದ ಮಹಾ ವಿದ್ಯಾಲಯಂಗಳಲ್ಲಿ ಹೆಚ್ಚಿನ ಬೋಧನಾ ಶುಲ್ಕ ವಸೂಲಾತಿ ಬಗ್ಗೆ

೮೧. ಶ್ರೀ ಎಂ.ಪಿ. ವೆಂಕಟಪ್ಪ (ಮಂಳಬಾಗಿಲು).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಖಾಸಗಿ ವೈದ್ಯ ಕಾಲೇಜುಗಳಲ್ಲಿ ಬೋಧನಾ ಶುಲ್ಕವನ್ನು ಹೆಚ್ಚಾಗಿ ವಸೂಲಿ ಮಾಡುತ್ತಿರುವ ದೂರುಗಳು ಬಂದಿವೆಯೇ?

ಆ) ಹಾಗಿದ್ದಲ್ಲಿ ಬೋಧನಾ ಶುಲ್ಕವನ್ನು ಪುನರ್ ವಿಮರ್ಶೆ ಮಾಡಲು ಸರ್ಕಾರದವರು ಕ್ರಮ ತೆಗೆದುಕೊಳ್ಳುವರೇ?

ಇ) ಈಗಾಗಲೇ ಖಾಸಗಿ ಕಾಲೇಜುಗಳು ಬೋಧನ ಶುಲ್ಕವನ್ನು ವಸೂಲಿ ಮಾಡಿದಿದ ರೆ ಅದನ್ನು ವಾಪಸು ಮಾಡಲು ಸರ್ಕಾರದವರು ಸೂಕ್ತ ಕ್ರಮ ಕೈಗೊಳ್ಳುವರೇ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಸಚಿವೆಯರು.)

ಅ) ಇಲ್ಲ

ಆ) ಪರಿಶೀಲನೆಯಲ್ಲಿ ಇದೆ.

ಇ) ಪ್ರಶ್ನೆಯಲ್ಲಿ (ಆ) ಭಾಗಕ್ಕೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಂ.ವಿ. ವೆಂಕಟಪ್ಪ.—ಮಾನ್ಯ ಮಂತ್ರಿಯವರೇ, ಈ ಪ್ರೈವೇಟ್ ಕಾಲೇಜುಗಳಲ್ಲಿ ಮೊದಲು ಒಂದೂವರೆ, ಎರಡು ಲಕ್ಷ ಡೊನೇಷನ್ ಎಂದು ವಸೂಲಿ ಮಾಡುತ್ತಿದ್ದರು, ಅದರ ಜೊತೆಗೆ ೫ ವರ್ಷದ ಫೀ ಎಂದು ಈ ಪ್ರೈವೇಟ್ ಕಾಲೇಜುಗಳಲ್ಲಿ ವಸೂಲಿ ಮಾಡುತ್ತಿದ್ದಾರೆ. ಅದೂ ಸ್ವಲ್ಪ ಹೆಚ್ಚು ಕಡಿಮೆ ಎರಡು ಲಕ್ಷ ಆಗುತ್ತದೆ ಅಂದರೆ, ಈ ಪ್ರೈವೇಟ್ ಕಾಲೇಜುಗಳಿಗೆ ಯಾರು ಯಾರು ಸೇರುತ್ತಾರೆ, ಅವರಿಗೆ, ಡಬಲ್ ಅಮೌಂಟ್ ಆಗುವ ಪರಿಸ್ಥಿತಿ ಬಂದಿದೆ. ತಾವು ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ. ಏನು ಪರಿಶೀಲನೆ ಮಾಡುತ್ತೀರಿ ಎಂಬುದನ್ನು ಸ್ವಲ್ಪ ತಿಳಿಸುತ್ತೀರಾ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ನಾವು ಈಗ ಪ್ರೈವೇಟ್ ಕಾಲೇಜುಗಳಿಗೆಲ್ಲಾ ಬರೆದಿದ್ದೇವೆ. ಈ ಬೋಧನಾ ಶುಲ್ಕ ಕೊಡುತ್ತಿರುವುದು ಜಾಸ್ತಿಯಾಗಿದೆ ಎಂಬುದು ಅರ್ಥವಾಗಿದೆ. ಇದು ಎಲ್ಲರ ಮನಸ್ಸಿಗೂ ಬಂದಿದೆ, ನಮಗೂ ಗೊತ್ತಾಗಿದೆ. ಇದನ್ನು ಎಲ್ಲರಿಗೂ ತಿಳಿಸಿ, ಇದನ್ನು ಯಾವ ರೀತಿಯಲ್ಲಿ ಕಡಿಮೆ ಮಾಡಬಹುದು ಎಂಬ ಬಗ್ಗೆ ನೀವೆಲ್ಲಾ ತಿಳಿಸಬೇಕೆಂದು ಹೇಳಿದಾಗ ಕೆಲವರು ಉತ್ತರ ಬರೆದಿದ್ದಾರೆ. ಇನ್ನು ಕೆಲವರು ಉತ್ತರ ಬರೆಯಬೇಕಾಗಿದೆ. ಸಾಧ್ಯವಾದಷ್ಟು ಬೇಗ ಉತ್ತರ ತರಿಸಿಕೊಂಡು ಈ ವಿಚಾರದಲ್ಲಿ ನಾವು ಯಾವ ರೀತಿಯ ಕ್ರಮ ತೆಗೆದುಕೊಳ್ಳಬೇಕೋ, ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಂ.ವಿ. ವೆಂಕಟಪ್ಪ.—ಅನೇಕ ಸಲ ಮೆರಿಟ್ ಮೇಲೆ ವಿದ್ಯಾರ್ಥಿಗಳು ಸೆಲೆಕ್ಟ್ ಆಗಿರುತ್ತಾರೆ. ಅವರನ್ನೂ ಪ್ರೈವೇಟ್ ಕಾಲೇಜುಗಳಿಗೆ ಅಲಾಟ್ ಮಾಡುತ್ತಾರೆ. ಮೊದಲು ಸರ್ಕಾರದ ಳಿ ಮೆಡಿಕಲ್ ಕಾಲೇಜುಗಳಿಗೆ ಅಲಾಟ್ ಮಾಡುತ್ತಾರೆ. ಆಮೇಲೆ ಪ್ರೈವೇಟ್ ಕಾಲೇಜುಗಳಿಗೆ ಅಲಾಟ್ ಮಾಡುತ್ತಾರೆ. ಈ ರೀತಿ ಅಲಾಟ್ ಮಾಡುವಾಗ, ಅವರು ಮೆರಿಟ್ ಮೇಲೆ ಪಾಸ್ ಆಗಿದ್ದರೂ, ಪ್ರೈವೇಟ್ ಕಾಲೇಜಿಗಳಿಗೆ ಅವರನ್ನು ಅಲಾಟ್ ಮಾಡುವುದರಿಂದ, ಸುಮಾರು ೨ ಲಕ್ಷ ಫೀ ಕೊಡಬೇಕಾಗುತ್ತದೆ. ಆದುದರಿಂದ ಆ ಪ್ರೈವೇಟ್ ಕಾಲೇಜುಗಳಿಗೆ ಬರೆದು, ಗವರ್ನಮೆಂಟ್ ವೆಂಡಿಕಲ್ ಕಾಲೇಜುಗಳಲ್ಲಿ ಎಷ್ಟೆಷ್ಟು ಬೋಧನಾ ಶುಲ್ಕ ಇದೆಯೋ ಅಷ್ಟನ್ನು ಮಾತ್ರ ವಸೂಲಿ ಮಾಡುವುದಕ್ಕಾಗುವುದಿಲ್ಲವೇ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಈ ವಿಷಯವನ್ನೂ ಅವರಿಗೆ ತಿಳಿಸಿ, ನಾವು ಪರಿಶೀಲನೆ ಮಾಡುತ್ತೇವೆ.

ಸರಕಾರದಿಂದ ಬಿಡುಗಡೆ ಮಾಡಿರುವ ವೈದ್ಯಕೀಯ ಸೀಟುಗಳ ಸಂಖ್ಯೆಯ ಬಗ್ಗೆ

೮೨. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವೆಯರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ರಾಜ್ಯದಲ್ಲಿರುವ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಎಷ್ಟು ;

ಆ) ಕಳೆದ ೩ ವರ್ಷಗಳಲ್ಲಿ ಸರ್ಕಾರದಿಂದ ಬಿಡುಗಡೆ ಮಾಡಿರುವ ವೈದ್ಯಕೀಯ ಸೀಟುಗಳ ಸಂಖ್ಯೆ ಎಷ್ಟು ;

ಇ) ವೈದ್ಯಕೀಯ ಕಾಲೇಜುಗಳಲ್ಲಿ ಕರ್ನಾಟಕದ ವಿದ್ಯಾರ್ಥಿಗಳನ್ನು ಬಿಟ್ಟು ಹೊರ ರಾಜ್ಯಗಳಿಂದ ಬಂದಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ;

ಈ) ಎಲ್ಲ ವೈದ್ಯಕೀಯ ಕಾಲೇಜುಗಳಿಗೆ ಸರ್ಕಾರದಿಂದ ಕೊಡುತ್ತಿರುವ ಹಣದ ಮೊತ್ತ ಎಷ್ಟು?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಆರೋಗ್ಯ ಸಚಿವೆಯರು).—

ಅ) ೧೮ (ಹದಿನೆಂಟು)

ಆ) ಪ್ರತ್ಯೇಕವಾಗಿ ಲಗತ್ತಿಸಲಾಗಿದೆ

ಇ) ಹೊರ ರಾಜ್ಯದಿಂದ ಬಂದಿರುವ ವಿದ್ಯಾರ್ಥಿಗಳ ಸಂಖ್ಯೆ . ೫೬೦೩

ಈ) ೧೩೫೨.೭೪ ಲಕ್ಷ ರೂಪಾಯಿಗಳು.